**ಇಂದು ದಿನಾಂಕ:** 20.02.2026 **ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ.ಕೆ.ಆರ್.ಕೆ ವಕೀಲರಿಂದಃ**

ನನ್ನ ತಾತನ ಹೆಸರು ಕುಳ್ಳಮರಿಗೌಡ. ನನ್ನ ತಂದೆಯ ಹೆಸರು ಕೆಂಚಬೋರೇಗೌಡ. ನನ್ನ ತಾತನಿಗೆ ಕೆಂಚಬೋರೇಗೌಡ ಮತ್ತು ಕಮರೇಗೌಡ ಇಬ್ಬರು ಮಕ್ಕಳು. ಕುಳ್ಳಬೋರೇಗೌಡರ ಹೆಂಡತಿಯ ಹೆಸರು ಚೆನ್ನಮ್ಮ. ಕೆಂಚಬೋರೇಗೌಡರ ಹೆಂಡತಿಯ ಹೆಸರು ಸಿದ್ದಮ್ಮ. ನಮ್ಮ ತಂದೆ ತಾಯಿ, ತಾತ ಅಜ್ಜಿ ತೀರಿಕೊಂಡಿದ್ದಾರೆ, ಅವರ ಮರಣ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ಕುಳ್ಳಬೋರೇಗೌಡ ಮತ್ತು ಅವರ ಪತ್ನಿ ಯಾವಾಗ ತೀರಿಕೊಂಡಿದ್ದಾರೆ ಎಂದು ಗೊತ್ತಿಲ್ಲ. ಕೆಂಚಬೋರೇಗೌಡ ಮತ್ತು ನನ್ನ ತಾಯಿ ಯಾವಾಗ ತೀರಿಕೊಂಡಿದ್ದಾರೆ ಎಂದು ಗೊತ್ತಿಲ್ಲ. ನನ್ನ ತಂದೆಗೆ ನಾನೊಬ್ಬನೆ ಗಂಡು ಮಗ ನನ್ನ ಅಕ್ಕ ಪುಟ್ಟಮ್ಮ ತೀರಿಕೊಂಡಿದ್ದಾರೆ ನನ್ನ ಅಕ್ಕನಿಗೆ ಇಬ್ಬರು ಮಕ್ಕಳಿದ್ದರು ಅವರು ಕೂಡ ತೀರಿಕೊಂಡಿದ್ದಾರೆ. ಪುಟ್ಟಮ್ಮನ ಮೊಮ್ಮಕ್ಕಳು ಇದ್ದಾರೆ. ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಲು ತೊಂದರೆ ಇರಲಿಲ್ಲ.

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳು ಗೊತ್ತು. ಕುಂಡ ಬಿನ್ ಹೊಟ್ಟೆತೋಪನವರಿಗೆ ಎಷ್ಟು ಜನ ಮಕ್ಕಳು ಎಂದು ಗೊತ್ತಿಲ್ಲ. ಅವರ ಹೆಂಡತಿಯ ಹೆಸರು ಗೊತ್ತಿಲ್ಲ. ಕುಂಡ ಬಿನ್ ಹೊಟ್ಟೆತೋಪರವರಿಗೆ ಹೆಂಡತಿ ಮತ್ತು ಮಕ್ಕಳು ಇರುವ ಬಗ್ಗೆ ದಾವೆಯಲ್ಲಿ ತಿಳಿಸಿಲ್ಲ. ನಿ.ಪಿ–1 ರ ದಾಖಲೆಯನ್ನು ದಿನಾಂಕ 16.05.2023 ರಂದು ಮಾಡಿಸಿದ್ದೇನೆ. ಬದುಕಿರುವವರನ್ನು ನಿ.ಪಿ–1 ರಲ್ಲಿ ಪಕ್ಷಗಾರರನ್ನಾಗಿ ಮಾಡಲು ತೊಂದರೆ ಇರಲಿಲ್ಲ ಎಂದರೆ ನಾನೊಬ್ಬನೆ ಬದುಕಿದ್ದೇನೆ. ದಾವಾ ಆಸ್ತಿಯ ಸ.ನಂ.52/4A. ಅದು ಈಗ ನನ್ನ ಹೆಸರಿನಲ್ಲಿದೆ.

ಅದರ ವಿಸ್ತೀರ್ಣ 4 ಎಕರೆ 13 ಗುಂಟೆ ಇದೆ. ಸದರಿ ಆಸ್ತಿ ನನ್ನ ಹೆಸರಿನಲ್ಲಿದೆ ಎಂದು ತೋರಿಸಲು ರೆವಿನ್ಯೂ ದಾಖಲೆಗಳನ್ನು ಹಾಜರುಪಡಿಸಿಲ್ಲ.

ಸ.ನಂ.52/4 ರಲ್ಲಿ ಒಟ್ಟು 13 ಎಕರೆ ಇತ್ತು. ಅದರಲ್ಲಿ ಸಿದ್ದೇಗೌಡ, ಕಮ್ಮರೇಗೌಡ, ಬೋರೇಗೌಡ ಇವರೆಲ್ಲರೂ ಹಂಚಿಕೊಂಡಿದ್ದಾರೆ. ದಾವಾ ಆಸ್ತಿ ಮೊದಲು ನನ್ನ ದೊಡ್ಡಪ್ಪ ಕಮರೇಗೌಡರವರಿಗೆ ಸೇರಿತ್ತು. ಕಮರೇಗೌಡರ ಹೆಂಡತಿಯ ಹೆಸರು ಪುಟ್ಟಮ್ಮ. ಕಮರೇಗೌಡರ ಮತ್ತು ಪುಟ್ಟಮ್ಮನವರಿಗೆ ಮಕ್ಕಳಿರಲಿಲ್ಲ ಎಂದರೆ ಸರಿ. ಸದರಿ ಕಮರೇಗೌಡ ಮತ್ತು ಪುಟ್ಟಮ್ಮರವರು 1 ನೇ ಪ್ರತಿವಾದಿಯನ್ನು ದತ್ತು ತೆಗೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ಸ.ನಂ.52/7 ರಲ್ಲಿ 13 ಗುಂಟೆ ಇದೆ. ಸ.ನಂ.52/7 ರ ಜಮೀನಿನ ಮೇಲೆ ನನಗೆ ಹಕ್ಕು ಇಲ್ಲ. ಸ.ನಂ.52/7 ರಲ್ಲಿ 1 ನೇ ಪ್ರತಿವಾದಿಗೆ ಹಕ್ಕು ಇದೆ ಎಂದರೆ ಸುಳ್ಳು ಅದು ನನಗೆ ಸೇರಬೇಕು. ಸ.ನಂ.52/4A ರಲ್ಲಿ ಒಟ್ಟು 11 ಎಕರೆ 4 ಗುಂಟೆ ಇತ್ತು. ಸ.ನಂ.52/4A ಈಗ 1 ನೇ ಪ್ರತಿವಾದಿಯ ಹೆಸರಿನಲ್ಲಿದೆ ಎಂದರೆ ಅದು ನಮ್ಮದು ಎಂದು ಕೇಸು ಹಾಕಿದ್ದೇನೆ. ಸ.ನಂ.52/4A ರಲ್ಲಿ ಈಗ 4 ಎಕರೆ 13 ಗುಂಟೆ ಮಾತ್ರ ಇದೆ ಎಂದರೆ ಸರಿ. ದಾವಾ ಸರ್ವೆ ನಂಬರ್ ಗೆ ಸಂಬಂಧಿಸಿದ ಎಲ್ಲಾ ಆರ್.ಟಿ.ಸಿ.ಗಳನ್ನು ಹಾಜರುಪಡಿಸದೇ ನನಗೆ ಅನುಕೂಲವಾಗುವಂತೆ ಒಂದೇ ಆರ್.ಟಿ.ಸಿ.ಯನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.

ದಾವಾ ಆಸ್ತಿಯನ್ನು ನನ್ನ ಹೆಸರಿಗೆ ಖಾತೆ ಮಾಡಿಕೊಡಬೇಕೆಂದು ತಹಶೀಲ್ದಾರರಿಗೆ ಅರ್ಜಿ ಸಲ್ಲಿಸಿಲ್ಲ. 1970 ರಿಂದ ದಾವಾ ಆಸ್ತಿ 1 ನೇ ಪ್ರತಿವಾದಿಯ ಹೆಸರಿನಲ್ಲಿ ಬಂದಿರುವುದಾಗಿ ತಿಳಿದಿದ್ದೇನೆ. ಅವರ ಹೆಸರಿನಲ್ಲಿದ್ದ ಖಾತೆಯನ್ನು ರದ್ದುಪಡಿಸಬೇಕೆಂದು ಮೇಲ್ಮನವಿ ಸಲ್ಲಿಸಿಲ್ಲ. ಸ.ನಂ.52/4A ಉತ್ತರಕ್ಕೆ ಚಿಕ್ಕಪುಟ್ಟಮ್ಮರವರ ಜಮೀನು ಇದೆ. ದಾವಾ ಆಸ್ತಿಯ ಆರ್ ಟಿ ಸಿ 1 ನೇ

ಪ್ರತಿವಾದಿಯ ಹೆಸರಿನಲ್ಲಿರುವುದು ಈಗ 4 ವರ್ಷಗಳಿಂದ ನೋಡುತ್ತಿದ್ದೇನೆ. ದಾವಾ ಆಸ್ತಿಯಲ್ಲಿ 1 ನೇ ಪ್ರತಿವಾದಿ ಸ್ವಾಧೀನವಿದ್ದಾರೆ ಎಂದರೆ ಸರಿಯಲ್ಲ ನಾನು ಇದ್ದೇನೆ. ನಾನು ಸ್ವಾಧೀನ ಇರುವ ಬಗ್ಗೆ ರೆವಿನ್ಯೂ ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. 1968 ಕ್ಕಿಂತ ಹಿಂದೆ ದಾವಾ ಆಸ್ತಿ ಕಮರೇಗೌಡರ ಹೆಸರಿನಲ್ಲಿತ್ತು ಎಂದರೆ ಸರಿ.

ಕಮರೇಗೌಡರಿಗೆ ಮಕ್ಕಳಿಲ್ಲದ ಕಾರಣ ದಿನಾಂಕ 18.10.1968 ರಂದು ದಾವಾ ಆಸ್ತಿಯನ್ನು ದಾನ ಪತ್ರದ ಮೂಲಕ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ದಿನಾಂಕ 18.10.1968 ರಿಂದಿಚೆಗೆ 1 ನೇ ಪ್ರತಿವಾದಿ ತನ್ನ ಹೆಸರಿಗೆ ಖಾತೆ ಮಾಡಿಸಿಕೊಂಡು ದಾವಾ ಆಸ್ತಿಯ ಮೇಲೆ ಬ್ಯಾಂಕ್ ನಿಂದ ಸಾಲ ಪಡೆದು ಸ್ವಾಧೀನ ಅನುಭವದಲ್ಲಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಅಳತೆ ಮಾಡಿಸಬೇಕೆಂದು ದಾವೆ ಸಲ್ಲಿಸುವ 6 ತಿಂಗಳ ಹಿಂದೆ 1 ನೇ ಪ್ರತಿವಾದಿ ಅರ್ಜಿ ಕೊಟ್ಟಿದ್ದಾಗ ಅಳತೆ ಮಾಡಿಸಲು ನಾನು ತೊಂದರೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಮರದೂರು ಗ್ರಾಮದ ಸ.ನಂ.52/7 ರಲ್ಲಿರುವ 5 ಎಕರೆ 27 ಗುಂಟೆ ಜಮೀನಿನಲ್ಲಿ 1 ನೇ ಪ್ರತಿವಾದಿ ಅರ್ಧ ಭಾಗ ಸೇರಬೇಕು ಎಂದರೆ ಸರಿಯಲ್ಲ. ಆ ಜಮೀನಿನಲ್ಲಿ 1 ನೇ ಪ್ರತಿವಾದಿ ಭಾಗ ಕೊಡುವಂತೆ ನನ್ನನ್ನು ಕೇಳಿದ ಕಾರಣ ಈ ದಾವೆ ಸಲ್ಲಿಸಿದ್ದೇನೆ ಎಂದರೆ ಸುಳ್ಳು.

ಮರದೂರು ಗ್ರಾಮದ ಸ.ನಂ.52/7 ರ ಜಮೀನಿಗೆ ಸಂಬಂಧಿಸಿದಂತೆ ಅಸಲು ದಾವಾ ನಂಬರ್ 93/2007 ನನ್ನ ವಿರುದ್ಧ ಭಾಗಾಂಶಕ್ಕಾಗಿ ದಾವೆ ಸಲ್ಲಿಸಿದ್ದರು ಎಂದರೆ ಗೊತ್ತಿಲ್ಲ. ಆ ಕೇಸು ದಿನಾಂಕ 12.01.2009 ರಂದು ವಜಾ ಆಗಿದೆ ಎಂದರೆ ಗೊತ್ತಿಲ್ಲ. ಆ ಕೇಸಿನಲ್ಲಿ ನನಗೆ ನ್ಯಾಯಾಲಯದಿಂದ ಸಮನ್ಸ ಜಾರಿಯಾಗಿದ್ದರೂ ಸಹ ಉದ್ದೇಶಪೂರ್ವಕವಾಗಿ ನ್ಯಾಯಾಲಯಕ್ಕೆ ಹಾಜರಾಗಿಲ್ಲ ಎಂದರೆ ಸರಿಯಲ್ಲ. ಅಸಲು ದಾವಾ ನಂಬರ್ 93/2007 ವಿರುದ್ಧ 1 ನೇಪ್ರತಿವಾದಿ

RA No. 51/2009 ಸಲ್ಲಿಸಿದ್ದು ಅದು ಕೂಡ ವಜಾ ಆಗಿದೆ ಎಂದರೆ ಗೊತ್ತಿಲ್ಲ. ದಾವಾ ಆಸ್ತಿ ತನಗೆ ಸೇರಬೇಕೆಂದು ಸಿದ್ದೇಗೌಡ ಬಿನ್ ಸಿದ್ದೇಗೌಡ ಇದೇ ನ್ಯಾಯಾಲಯದಲ್ಲಿ ದಾವೆ ಹಾಕಿದ್ದಾರೆ ಎಂದರೆ ಗೊತ್ತಿಲ್ಲ. ಸದರಿ ಸಿದ್ದೇಗೌಡರನ್ನು ಎತ್ತಿಕಟ್ಟಿ 1 ನೇ ಪ್ರತಿವಾದಿ ಆಸ್ತಿಯನ್ನು ಹೊಡೆದುಕೊಳ್ಳಬೇಕು ಎಂಬ ಉದ್ದೇಶದಿಂದ ನಾವಿಬ್ಬರು ಕೇಸು ಹಾಕಿದ್ದೇವೆ ಎಂದರೆ ಸರಿಯಲ್ಲ. ಸಿದ್ದೇಗೌಡರನ್ನು ಈ ಕೇಸಿನಲ್ಲಿ ಪಕ್ಷಗಾರರನ್ನಾಗಿ ಮಾಡಲು ತೊಂದರೆ ಇರಲಿಲ್ಲ ಎಂದರೆ ಸರಿಯಲ್ಲ. ಈ ಕೇಸಿಗೋಸ್ಕರ ನಿ.ಪಿ–1 ನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಸಲ್ಲಿಸಿರುವ ಪ್ರಮಾಣ ಪತ್ರವನ್ನು ನಾನೇ ಹೇಳಿ ಬರೆಸಿದ್ದೇನೆ. ದಾವಾ ಆಸ್ತಿಯ ಮೇಲೆ ನನಗೆ ಹಕ್ಕು ಮತ್ತು ಸ್ವಾಧೀನವಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ 1 ನೇ ಪ್ರತಿವಾದಿಯೇ ಹಕ್ಕುದಾರರು ಎಂದರೆ ಸುಳ್ಳು.

2 ನೇ ಪ್ರತಿವಾದಿ ನಮ್ಮ ಊರಿನವರೇ ನಮ್ಮ ಸಂಬಂಧಿಕರಲ್ಲ. 2 ನೇ ಪ್ರತಿವಾದಿಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಇಲ್ಲದಿದ್ದರೂ ಸಹ ಉದ್ದೇಶಪೂರ್ವಕವಾಗಿ ಸೇರಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ವಾದ ಪತ್ರ ಮತ್ತು ಪ್ರಮಾಣ ಪತ್ರದಲ್ಲಿರುವುದೆಲ್ಲ ಸುಳ್ಳು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಜಮೀನನ್ನು ಹೇಗಾದರೂ ಮಾಡಿ ಹೊಡೆದುಕೊಳ್ಳಬೇಕೆಂದು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಕೇಸು ಹಾಕಿದ್ದೇನೆ ಎಂದರೆ ಸರಿಯಲ್ಲ. ನನ್ನ ದೊಡ್ಡಪ್ಪ 1 ನೇ ಪ್ರತಿವಾದಿಗೆ ದಾನ ಪತ್ರ ಮಾಡಿರುವುದು ನನಗೆ ಗೊತ್ತಿದೆ ಎಂದರೆ ಸುಳ್ಳು. ದಾವಾ ಆಸ್ತಿಯ ಮೇಲೆ ನನಗಾಗಲೀ ನನ್ನ ತಂದೆ ಮತ್ತು ತಾತನಿಗಾಗಲೀ ಯಾವುದೇ ಹಕ್ಕು ಇರಲಿಲ್ಲ ಎಂದರೆ ಸುಳ್ಳು.

**ಮರು ವಿಚಾರಣೆ ಇಲ್ಲ.**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

***ಓ.ಹೆ.ಕೆ.ಸರಿ ಇದೆ.***

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**

PW-01

ಪಿರಿಯಾಪಟ್ಟಣ